<u>ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್.ಸಿ ನ್ಯಾಯಾಲಯ</u>

<u>ಹಿರೇಕೆರೂರು</u>

<u>ಸಿ ಸಿ ನಂ: **280/2019**</u>

ಸಿ .ಡಬ್ಲ್ಯೂ-05
ಪಿ .ಡಬ್ಲ್ಯೂ-04

| | | |
|---|---|---|
| ಹೆಸರು | : | ಮರಿಗೌಡ |
| ತಂದೆ ಹೆಸರು | : | ಈಶ್ವರಗೌಡ ಪಾಟೀಲ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಗಂಗಾಪುರ |

<u>ಇಂದು ದಿಃ **23-03-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ</u>

ದಿಃ 04-07-2018 ರಂದು ರಾತ್ರಿ ಗಂಗಾಪುರ ಆಂಜನೇಯ ಹಾಗೂ ಕೊಡಿ ಕೆಂಚಮ್ಮ ದೇವಸ್ಥಾನಗಳಲ್ಲಿ ಕಳ್ಳತನ ವಾಗಿತ್ತು. ನಮಗೆ ದಿಃ 05-07-2018 ರಂದು ಬೆಳಿಗ್ಗೆ ವಿಷಯ ಗೊತ್ತಾಗಿರುತ್ತದೆ. 2 ದೇವಸ್ಥಾನದ ಹುಂಡಿಗಳನ್ನು ಕಳ್ಳರು ಒಡೆದುಕೊಂಡು ತೆಗೆದುಕೊಂಡು ಹೋಗಿದ್ದರು. ಚಾಸಾ-6 ಹಾಗೂ 7 ರವರಿಗೆ ನಾನು ಪೋನ ಮಾಡಿ ಕರೆಸಿರುತ್ತೇನೆ. ನಾನು, ಚಾಸಾ-6 ಹಾಗೂ 7 ರವರು ಸೇರಿ ದೇವಸ್ಥಾನಕ್ಕೆ ಹೋಗಿರುತ್ತೇವೆ ಹಾಗೂ ಅಲ್ಲಿ ಸಾರ್ವಜನಿಕರು ಸೇರಿದ್ದರು. ದೇವಸ್ಥಾನದ ಹುಂಡಿ ಒಡೆದಿತ್ತು, ನಾವು ಚಾಸಾ-1 ರವರಿಗೆ ಫೋನ್ ಮಾಡಿ ಸದರಿ ವಿಷಯ ತಿಳಿಸಿರುತ್ತೇವೆ. ಚಾಸಾ-1 ರವರು ನಮ್ಮ ಊರಿಗೆ ಬಂದು ಆಂಜನೇಯ ಹಾಗೂ ಕೊಡಿ ಕೆಂಚಮ್ಮ ದೇವಸ್ಥಾನಕ್ಕೆ ಬಂದು ನೋಡಿರುತ್ತಾರೆ. ಈ ಆಂಜನೇಯ ದೇವಸ್ಥಾನದಲ್ಲಿ ಅಂದಾಜು 2,500/- ರೂ. ಹಾಗೂ ಕೊಡಿ ಕೆಂಚಮ್ಮ ದೇವಸ್ಥಾನದಲ್ಲಿ 2000/- ರೂ. ಕಳ್ಳತನವಾಗಿತ್ತು. ನಮ್ಮ ಊರ ಪಕ್ಕದಲ್ಲಿರುವ ಚಿಕ್ಕಮತ್ತೂರ ಗ್ರಾಮದ ಆಂಜನೇಯ ಹಾಗೂ ಮಾಸ್ತೇಮ್ಮ ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನವು ದಿಃ 04-07-2018 ರಂದು ಆಗಿತ್ತು. ಸದರಿ ವಿಷಯ ನಮಗೆ ದಿಃ 05-07-2018 ರಂದು ಗೊತ್ತಾಗಿರುತ್ತದೆ. ನಮ್ಮನ್ನು ಚಾಸಾ-4 ರವರು ಚಿಕ್ಕಮತ್ತೂರಿಗೆ ಕರೆದಿರುತ್ತಾರೆ. ಅಲ್ಲಿ ಆಂಜನೇಯ ದೇವಸ್ಥಾನದಲ್ಲಿ ಅಂದಾಜು 2,500/- ರೂ. ಹಾಗೂ ಮಾಸ್ತೇಮ್ಮ ದೇವಸ್ಥಾನದಲ್ಲಿ 2000/- ರೂ. ಕಳ್ಳತನವಾಗಿತ್ತು. ದಿಃ 04-07-2018 ರಂದು ರಾತ್ರಿ 12-00 ಗಂಟೆಯಿಂದ ಬೆಳಗಿನ ಜಾವ 5-00 ಗಂಟೆಯ ಮಧ್ಯ ಕಳ್ಳತನವಾಗಿತ್ತು. ಚಾಸಾ-1 ರವರು ಪಿರ್ಯಾದಿಯನ್ನು ಕೊಟ್ಟಿರುತ್ತಾರೆ. ಆ ಕುರಿತು ನಾನು ದಿಃ 07-07-2018 ರಂದು ಹೇಳಿಕೆಯನ್ನು ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಯು. ಬಿ. ಜೆ. ವಕೀಲರಿಂದಃ</u>

ಗಂಗಾಪುರದ ಆಂಜನೇಯ ಹಾಗೂ ಕೊಡಿ ಕೆಂಚಮ್ಮ ದೇವಸ್ಥಾನಗಳ ಟ್ರಸ್ಟ ಕಮೀಟಿ ಇರುತ್ತದೆ. ಸದರಿ ದೇವಸ್ಥಾನದ ಕಮೀಟಿಯವರು ಕಳ್ಳತನ ಆದ ಬಗ್ಗೆ ಪಿರ್ಯಾದಿಯನ್ನು ಕೊಟ್ಟಿಲ್ಲ.

**ಸಿ ಸಿ ನಂ: 280/2019**

ಸಿ .ಡಬ್ಲ್ಯೂ-05
ಪಿ .ಡಬ್ಲ್ಯೂ-04

ಪಿರ್ಯಾದಿಯನ್ನು ನಾನು ಕೊಟ್ಟಿಲ್ಲ. ಪಿರ್ಯಾದಿಯನ್ನು ಯಾರು ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಹೇಳಿಕೆಗಳನ್ನು ಹಿರೇಕೆರೂರು ಪೋಲಿಸ ಠಾಣೆಯಲ್ಲಿ ಚಾಸಾ-1 ರವರ ಮುಂದೆ ಹೇಳಿರುತ್ತೇವೆ. ಯಾವ ಯಾವ ದೇವಸ್ಥಾನದಲ್ಲಿ ಎಷ್ಟು ಎಷ್ಟು ಹಣ ಹೋಗಿತ್ತು ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಯಾರು ಕಳ್ಳತನ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ದಿಃ 04-07-2018 ರಂದು ಯಾವುದೇ ರೀತಿ ಹುಂಡಿ ಒಡೆದು ಕಳ್ಳತನ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಚಿಕ್ಕಮತ್ತೂರು ಗ್ರಾಮದ ದೇವಸ್ಥಾನದಲ್ಲಿ ಯಾವುದೇ ರೀತಿ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ದಿಃ 04-07-2018 ರಂದು ಯಾವುದೇ ಕಳ್ಳತನ ಆಗದೇ ಇದ್ದರು ಸಹ ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 23-03-2022.

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು